## ತದ್ಧಿತಾಂತಗಳು

ನಾಮಪದಗಳಿಗೆ ಬೇರೆಬೇರೆ ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳು.

### ತದ್ಧಿತಾಂತಗಳ ವಿಧಗಳು

| |
|---|
| 1) ತದ್ಧಿತಾಂತನಾಮ |
| 2) ತದ್ಧಿತಾಂತ ಭಾವನಾಮ |
| 3) ತದ್ಧಿತಾಂತ ಅವ್ಯಯ |

### 1) ತದ್ಧಿತಾಂತನಾಮ :–

ನಾಮಪದಗಳಿಗೆ ಇಗ,ಅಡಿಗ,ಕಾರ,ಕೋರ,ಗಾರ,ವಂತ,ವಾಳ,ವಳ,ಅಳಿ,ಗುಳಿ,ಅರ, ಅನೆಯ –ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತನಾಮ ಎನ್ನುವರು

| ಪುಲ್ಲಿಂಗ | | | ಸ್ತ್ರೀಲಿಂಗ |
|---|---|---|---|
| • ಬಳೆಗಾರ | • ಲೆಕ್ಕಿಗ | • ಓಲೆಕಾರ | • ಬಳೆಗಾರ್ತಿ |
| • ಕೋಲುಕಾರ | • ಸಾಲಗಾರ | • ಹಾವಾಡಿಗ | • ಕೋಲುಕಾರ್ತಿ |
| • ಕನ್ನಡಿಗ | • ಗುಣವಂತ | • ಲಂಚಕೋರ | • ಕನ್ನಡತಿ |
| • ಸಿರಿವಂತ | • ಬುದ್ಧಿವಂತ | • ಹೂವಾಡಿಗ | • ಸಿರಿವಂತೆ |
| • ಒಕ್ಕಲಿಗ | • ಮಡಿವಾಳ | • ಕುಂಬಾರ | • ಒಕ್ಕಲಗಿತ್ತಿ |
| • ಮಾಲೆಗಾರ | • ವಾಚಾಳಿ | • ಸಾಲಗಾರ | • ಮಾಲೆಗಾರ್ತಿ |
| • ಬೇಟೆಗಾರ | • ಲಂಚಗುಳಿ | • | • |

## 2) ತದ್ಧಿತಾಂತ ಭಾವನಾಮ

ನಾಮಪದಗಳ ಮುಂದೆ ಭಾವಾರ್ಥಗಳಲ್ಲಿ – ತನ,ಇಕೆ,ಪು,ಮೆ, ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತಭಾವನಾಮ ಎನ್ನುವರು

| ತದ್ಧಿತಾಂತ ಭಾವನಾಮ | |
|---|---|
| • ಜಾಣತನ | • ಜಾಣ್ಮೆ |
| • ಚೆಲುವಿಕೆ | • ಹಿರಿಮೆ |
| • ಕಪ್ಪು | • ದೊಡ್ಡತನ |
| • ಪೆರ್ಮೆ | • ಬಡತನ |
| • ಸಿರಿತನ | • |

## 3) ತದ್ಧಿತಾಂತ ಅವ್ಯಯ

ನಾಮಪದಗಳ ಮುಂದೆ ಅಂತೆ, ವೋಲ್, ವೋಲು, ತನಕ, ವರೆಗೆ, ಇಂತ, ಆಗಿ, ಓಸುಗ, ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳಾಗುತ್ತವೆ.

| ತದ್ಧಿತಾಂತ ಅವ್ಯಯ | |
|---|---|
| • ಚಂದ್ರನಂತೆ | • ಅವನಂತೆ |
| • ಚಂದ್ರನವೂಲ್ | • ಅವನವೊಲ್ |
| • ನನ್ನವೊಲು | • ಅವಳವೊಲು |
| • ಮನೆಯವೋಲು | • ಇದರವೋಲ್ |
| • ಕರಡಿವೋಲ್ | • ನದಿಯವೋಲ್ |

| | |
|---|---|
| • ಮನೆಯತನಕ | • ಹಿಮಾಲಯದತನಕ |
| • ಶಾಲೆಯವರೆಗೆ | • ಪಟ್ಟಣದವರೆಗೆ |
| • ಇವಳಮಟ್ಟಿಗೆ | • ಸುಂದರನಮಟ್ಟಿಗೆ |
| • ನನಗೋಸ್ಕರ | • ಬೆಕ್ಕಿಗೋಸ್ಕರ |
| • ರಾಧೆಗಿಂತ | • ಅದಕ್ಕಿಂತ |
| • ನಿನಗಾಗಿ | • ಇದಕ್ಕಾಗಿ |
| • ಮದುವೆಗೋಸುಗ | • ಕಾಗೆಗೋಸುಗ |

## ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳಾಗುತ್ತವೆ.

ಧಾತು : ಕ್ರಿಯಾಪದದ ಮೂಲರೂಪ ಧಾತು

ಉದಾ: ಓಡು , ತಿನ್ನು , ಬರೆ

### ಕೃದಂತಗಳ ವಿಧಗಳು

| |
|---|
| 1) ಕೃದಂತನಾಮ |
| 2) ಕೃದಂತ ಭಾವನಾಮ |
| 3) ಕೃದಂತಾವ್ಯಯ |

## 1) ಕೃದಂತನಾಮ :-

ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ಯ ಪ್ರತ್ಯಯ ಸೇರಿ ಆಗುವ ಪದಗಳನ್ನು' ಕೃದಂತನಾಮಗಳು ' ಎನ್ನುವರು. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರಿಕೊಳ್ಳುತ್ತವೆ

ಉದಾ: ಓಡು+ವ+ಅ= ಓಡವ

ಓಡು+ದ+ಅ=ಓಡಿದ

ಓಡ+ಅದ+ಅ=ಓಡದ

| ವರ್ತಮಾನ ಕೃದಂತ | ಭೂತ ಕೃದಂತ | ನಿಷೇಧ ಕೃದಂತ |
|---|---|---|
| ' ವ ' ' ಉವ ' | ' ದ ' | ' ಅದ ' |
| • ಓಡುವ | • ಓಡಿದ | • ಓಡದ |
| • ಬಾಳುವ | • ಬಾಳಿದ | • ಬಾಳದ |
| • ಬರೆಯುವ | • ಬರೆದ | • ಬರೆಯದ |
| • ತಿನ್ನುವ | • ತಿಂದ | • ತಿನ್ನದ |
| • ನಡೆಯುವ | • ನಡೆದ | • ನಡೆಯದ |

## 2) ಕೃದಂತ ಭಾವನಾಮ :-

ಧಾತುಗಳಿಗೆ ಭಾವಾರ್ಥದಲ್ಲಿ ಇಕೆ,ಇಗೆ,ಗೆ,ತ,ಟ,ಇತ,ಅವು,ವು,ಕೆ,ತೆ,ಪು,ವಳಿಕೆ,ವಣಿಗೆ ಮುಂತಾದ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಾಗುತ್ತವೆ.

| | |
|---|---|
| • ಓಟ | • ನೋಟ |
| • ಬಾಳುವಿಕೆ | • ಬರೆಯುವಿಕೆ |
| • ಅಂಜಿಕೆ | • ನಂಬಿಕೆ |
| • ಉಡುಗೆ | • ತೊಡುಗೆ |

| | |
|---|---|
| • ನಗುವುದು | • ತಿನ್ನುವುದು |
| • ನೆನಪು | • ಮೆರವಣಿಗೆ |
| • ಹೊಲಿಗೆ | • ನೋವು |
| • ಮಾಟ | • ತಿನ್ನುವಿಕೆ |
| • ನಡೆತ | • ಒಪ್ಪಿತ |

### 3) ಕೃದಂತಾವ್ಯಯ:–

ಧಾತುಗಳ ಮೇಲೆ ಉತ್ತ, ಅದೆ, ದರೆ, ಅಲು, ಅಲಿಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಗಳಾಗುತ್ತವೆ.

| | |
|---|---|
| • ಮಾಡುತ್ತ | • ತಿನ್ನುತ್ತ |
| • ಮಾಡದೆ | • ಬರದೆ |
| • ಮಾಡಲು | • ನೋಡಲು |
| • ಮಾಡಲಿಕ್ಕೆ | • ಕೇಳಿ |
| • ಮಾಡ | • ಕೇಳಲಿಕ್ಕೆ |
| • ಮಾಡಿ | • ನೋಡ |
| • ಬರೆದು | • ಮಾಡುತ |
| • ತಿಂದು | • ನಡೆಯುತ್ತ |
| • ನೋಡುತ್ತ | • ಓಡಿ |